ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಯಾದಗಿರಿ.

ಸಿ.ಸಿ ನಂಃ **517/ 2022**

| | | |
|---|---|---|
| ಸಾಕ್ಷಿಯ ಹೆಸರುಃ | ಸಂಜೀವಪ್ಪ | ಪ್ರಾಸಾಃ 8 |
| ಗಂಡನ/ತಂದೆಯ ಹೆಸರುಃ | ಈರಪ್ಪ | ಚಾಸಾಃ 7 |
| ವಯಸ್ಸುಃ | 50 ವರ್ಷ | ದಿಃ 07-03-2026 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಯರಗೋಳ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ನನಗೆ ಚಾಸಾಃ 1, 4 ರಿಂದ 6 ರವರು ಹಾಗೂ ಆರೋಪಿತನ ಪರಿಚಯವಿದೆ. ನನಗೆ ಚಾಸಾಃ 8 ರವರ ಪರಿಚಯವಿಲ್ಲ. ಸದರಿ ಚಾಸಾಃ 1 ರವರ ಅಂಗಡಿಗೆ ನಾನು ಹೋಗಿರುವಾಗ ಜಗಳವಾಗಿರುತ್ತದೆ ಆವಾಗ ನಾನು ಜಗಳ ನೋಡಿ ಮರಳಿ ಬಂದಿರುತ್ತೇನೆ. ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸರಕಾರಿ ಸಹಾಯಕ ಅಭಿಯೋಜಕರು ಪಾಟಿ ಸವಾಲಿಗಾಗಿ ಅವಕಾಶ ಕೋರಿದ್ದು ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ದಿನಾಂಕಃ 06-09-2021 ರಂದು ಚಾಸಾಃ 1 ರವರ ಅಂಗಡಿಗೆ ಬೆ. 10.30 ಗಂಟೆಗೆ ಹೋಗಿರುತ್ತೇನೆ ಎಂದರೆ ಸರಿ. ಚಾಸಾಃ 1 ರವರಿಗೆ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಎಂದರೆ ಸರಿ. 2 ನೇ ಆರೋಪಿತನು ಚಾಸಾಃ 4 ರವರಿಗೆ ಮುಖಕ್ಕೆ ಹೊಡೆದಿರುತ್ತಾನೆ ಎಂದರೆ ಸರಿ. ಚಾಸಾಃ 1 ರವರು ಕೇಳಿದಾಗ 1 ಮತ್ತು 3 ನೇ ಆರೋಪಿತರು ಚಾಸಾಃ 1 ರವರ ಎದೆಯ ಮೇಲಿನ ಅಂಗಿ ಹಿಡಿದು ಎಳೆದು ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸರಿ. ಚಾಸಾಃ 1 ರವರಿಗೆ ಆರೋಪಿತರು ಅಡ್ಡ ಗಟ್ಟಿ ತಡೆದಿರುತ್ತಾರೆ ಎಂದರೆ ಸರಿ. ಚಾಸಾಃ 5 ಮತ್ತು 6 ರವರು ಜಗಳವನ್ನು ಬಿಡಿಸಿರುತ್ತಾರೆ ಎಂದರೆ ಸರಿ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಪಾಟಿ ಸವಾಲು ಃಆರೋಪಿ ಪರ ಶ್ರೀ ಜಿ. ಬಿ. ಆರ್. ವಕೀಲರಿಂದಃ

**1.** ಜಗಳವಾದಾಗ 20-25 ಜನರು ಇದ್ದರು. ಸದರಿ ಗುಂಪಿನಲ್ಲಿ ಯಾರು-ಯಾರಿಗೆ ಹೊಡೆದಿರುತ್ತಾರೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಯಾರು-ಯಾರಿಗೆ ಬೈದಿರುತ್ತಾರೆ

ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಸದರಿ ನಾನು ಅಂಗಡಿಗೆ ಹೋಗಿರುತ್ತೇನೆ ಮತ್ತು ಜಗಳ ನೋಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ